**Q.P. Code – 50348**

**ತೃತೀಯ ಬಿ.ಎ. ಪದವಿ ಪರೀಕ್ಷೆ**

**ಸೆಪ್ಟೆಂಬರ್/ಅಕ್ಟೋಬರ್ 2013**

**(ದೂರ ಶಿಕ್ಷಣ)**

**(ಹೊಸಬರಿಗೆ/ಹಳಬರಿಗೆ)**

**ಬಸವ ತತ್ವ**

**(DAC 530) ಪತ್ರಿಕೆ ೩ – ಕರಣ ಹಸಿಗೆ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

***ಸೂಚನೆಗಳು :*** *1)* ***30*** *ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು* ***70*** *ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2)* ***20*** *ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು* ***80*** *ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3) ವಿಶೇಷ ಸೂಚನೆ : ಹೊಸಬರು* ***ಡಿ****–ವಿಭಾಗದ ಪ್ರಶ್ನೆಯನ್ನು* ***ಕಡ್ಡಾಯವಾಗಿ*** *ಉತ್ತರಿಸಬೇಕು.*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) "ಅಂದು ಇಂದು ಮತ್ತೊಂದೆನಬೇಡ
ದಿನ ಎಂದೇ "ಶಿವಶರಣೆಂ' ಬವಗೆ:
ದಿನ ಎಂದೇ "ಹರಶರಣೆಂ' ಬವಗೆ
ದಿನ ಎಂದೇ ನಮ್ಮ ಕೂಡಲ ಸಂಗಮ ಮಾಣದೆ ನೆನೆವಂಗೆ".

(ಆ) "ಸತ್ಯದಲ್ಲಿ ನಡೆವುದು ಶೀಲ,
ಸತ್ಯದಲ್ಲಿ ನುಡಿವುದು ಶೀಲ,
ಸತ್ಯ ಸದಾಚಾರದಲ್ಲಿ ವರ್ತಿಸಿ
ನಿತ್ಯವನರಿವುದೆ ಶೀಲ ಕಾಣೆ ಭೋ,
ಮಹಾಲಿಂಗ ಗುರು ಶಿವಸಿದ್ದೇಶ್ವರ ಪ್ರಭುವೇ".

(ಇ) "ಹೊನ್ನಿನೊಳಗೊಂದೊರೆಯ,
ಸೀರೆಯಳಗೊಂದೆಳೆಯ,
ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ,
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯ
ಕೂಡಲ ಸಂಗಮ ದೇವಾ".

ವಿಭಾಗ – ಬಿ

2. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **4 × 10 = 40**

(ಅ) ಲಿಂಗ ಪೂಜೆ ಎಂದರೇನು? ವಿವರಿಸಿ.

(ಆ) ಕರಣ ಹಸಿಗೆ ಎಂದರೇನು? ವಿವರಿಸಿ.

(ಇ) ಆತ್ಮನ ಸ್ವರೂಪಗಳನ್ನು ವಿವರಿಸಿ.

(ಈ) ಇಡೀ ವಿಶ್ವಕ್ಕೆ ಅನ್ವಯಿಸುವ ಅಸ್ಪೃಶ್ಯತೆಯ ನಿವಾರಣೆಗೆ ಬಸವಣ್ಣನವರು ಮಾಡಿದ ತಾತ್ವಿಕ ಪ್ರಯತ್ನವನ್ನು ವಿವರಿಸಿ.

(ಉ) ಶೀಲ ಎಂದರೇನು? ಬಸವಣ್ಣನವರ ನಿಜವಾದ ನೇಮದ ವ್ಯಾಖ್ಯಾನವೇನು? ವಿವರಿಸಿ.

ವಿಭಾಗ – ಸಿ

3. ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ : **4 × 5 = 20**

(ಅ) ಒಳ ಪಂಗಡಗಳ ನಿರ್ಮೂಲನ

(ಆ) ನಿಜವಾದ ವೀರಶೈವ

(ಇ) ಮನಸ್ಸಿನ ಪರಿಶುದ್ಧತೆ

(ಈ) ಶರಣರ ಅಘಟಿತಾ ಘಟನಾ ಶಕ್ತಿ

(ಉ) ನಿಸ್ವಾರ್ಥ ಸೇವೆ

ವಿಭಾಗ – ಡಿ

4. ವಿಶೇಷ ಸೂಚನೆ : ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : **1 × 10 = 10**

(ಅ) "ಅಹಿಂಸೆಯು ಮಾನವ ಜನಾಂಗವನ್ನು ವಿನಾಶದ ದವಡೆಯಿಂದ ಪಾರು ಮಾಡಬೇಕಾದ ಅಸ್ತ್ರ" ಎಂಬುದನ್ನು ನಿಜ ಧರ್ಮದ ತಿರುಳಿನಲ್ಲಿ ಹೇಗೆ ಶರಣರು ವಿವರಿಸಿದ್ದಾರೆ?

---